SCHEME OF VALUATION **Code No. 01(OS)**

**March 2017**

**KANNADA**

| Qn. No. | | | Marks |
|---|---|---|---|
| | | **ಅ – ವಿಭಾಗ** | |
| I. | | **ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.** | 10 × 1 = 10 |
| | 1. | ಉರಗಪತಾಕ ಎಂದರೆ ದುರ್ಯೋಧನ | |
| | 2. | ಅಂಗಡಿ ಮುಂಗಟ್ಟನ್ನು ಇಟ್ಟುಕೊಂಡು ವ್ಯಂಗ್ಯ ಮಾತುಗಳನ್ನಾಡಿ ಭಂಗ ಬಿದ್ದು ಗಳಿಸುತ್ತಾರೆ. | |
| | 3. | ಕತ್ತಲೆಯ ಕೆಸರಿನಲ್ಲಿ (ಹುದಲಿನಲ್ಲಿ) ಹೂತು ಹೋಗುತ್ತಾರೆ. | |
| | 4. | ಅಜ್ಜಿಯ ಗಂಟಲು ಕಟ್ಟಿಹೋಗಿದೆ. | |
| | 5. | ರಸಾನುಭೂತಿಯ ರಸಪಥವನ್ನಾಗಿ ಪರಿಗಣಿಸಿದ್ದರು. | |
| | 6. | ರಾಕ್ಷಸ ಪಟ್ಟಣ ಎಂದು ಕರೆದಿದ್ದಾರೆ. | |
| | 7. | ಗರುಡನಾಭಿ ಒಬ್ಬ ಮಂತ್ರವಾದಿ. | |
| | 8. | ಮರವನ್ನು ಕಡಿಸುತ್ತಿರುವವನು ಶೆಟ್ಟಿ. | |
| | 9. | ಬಲಗೈ ಹೆಬ್ಬೆರಳನ್ನು ಬೇಡಿದರು. | |
| | 10. | ಪಾಂಡವರ ಎಲ್ಲ ಅಪಮಾನಗಳಿಗೆ ಕುರುಕ್ಷೇತ್ರ ಯುದ್ಧವೇ ಕೊನೆ. | |
| | | **ಆ – ವಿಭಾಗ** | |
| II. | (ಅ) | **ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** | 4 × 2 = 8 |
| | 11. | ಕೆಲವರು ಒರತೆಯನ್ನು ಕಂಡು ಬಾವಿಯನ್ನು ತೋಡಿಸುವರು. ಅರವಟ್ಟಿಗೆ, ಛತ್ರವನ್ನು ತಮ್ಮದೆನ್ನುವರು – ಪೈರು ಚಿಗುರದಿದ್ದರೆ ಮಳೆ ಸುರಿಯದಿದ್ದರೆ ಅವರು ಹೇಗೆ ಈ ಕೆಲಸಗಳನ್ನು ಮಾಡಲು ಸಾಧ್ಯ. | |
| | 12. | ಮಗನೆ, ಹರಿಶ್ಚಂದ್ರರಾಯನ ಕುಮಾರ ! ಹೇಳು, ಯಾವ ಜಾಗ ನಿನ್ನನ್ನು ಆಹುತಿ ತೆಗೆದುಕೊಂಡಿದೆ. ನೀನೆಲ್ಲಿದ್ದೀಯಾ ಓ ಎನ್ನುತ್ತಿರುವೆಯಾ ಮಗನೆ, ಬಾಯಿಬಿಡದೆ ಅಮ್ಮಾ ಇಲ್ಲಿ ಬಾ ಎನ್ನುತ್ತಿದ್ದೀಯಾ, ನನ್ನೊಬ್ಬಳನ್ನೇ ಬಿಟ್ಟು ಒಬ್ಬನೇ ಏಕೆ ಸಾವನ್ನಪ್ಪಿದೆ. | |
| | 13. | ಎಲುಬಿನ ಹಂದರವೆಂಬ ಇಗರ್ಜಿ, ಬೆನ್ನುಮೂಳೆ ಹೆಗಲುಮೂಳೆಗಳಿಂದಾದ ಶಿಲುಬೆಯಲ್ಲಿ ಏಸುಕ್ರಿಸ್ತನಿರುವುದು. ಬುದ್ಧನು ಮಸ್ತಿಷ್ಕವೆಂಬ ಸ್ತೂಪದಲ್ಲಿ – ಮಹಾವೀರರು ಅಸ್ಥಿಯೊಳಗಿನ ಬಸದಿಯಲ್ಲಿರುವುದು. | |

| | | | |
|---|---|---|---|
| | 14. | ತಲೆಯ ಮೇಲೆ ದೀಪದ ಕಾವು – ಹೊಟ್ಟೆಯಲ್ಲಿ ಹಸಿವಿನ ಸಂಕಟ – ಪರಿಣಾಮವಾಗಿ ಜೀವನದಲ್ಲಿ ಕುದ್ದು ಕುದ್ದು ಆವಿಯಾಗಿರುವುದು – ದಿನನಿತ್ಯ ಹಸಿವಿನಿಂದ ಬಳಲುತ್ತಿರುವುದು.<br>15. ಬಂಧುಗಳು ದೂರದಿಂದಲೇ ಶುಭ ಕೋರಿರುವುದು – ಯಾರೊಬ್ಬರೂ ಹೆಸರನ್ನು ಸೂಚಿಸದೇ ಇರುವುದು. | |
| | **(ಆ)** | **ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.** | **3 × 2 = 6** |
| | 16. | ಬಿರುಗಾಳಿಗೆ ಸಿಲುಕಿಕೊಂಡ ದೋಣಿಯ ಹಾಗೆ – ಕ್ಷಣ ಮಾತ್ರದಲ್ಲಿ ಎಲ್ಲವೂ ಅದಲು ಬದಲಾಗಿರುವುದು – ಕಾದರ್ ಹೆಂಡತಿಯನ್ನು ಬಿಟ್ಟಿರುವುದು – ಪತ್ನಿ ಜೊಹರಾ ಹಾಗೂ ಮಕ್ಕಳು ಅತಂತ್ರ. | |
| | 17. | ಹನುಮನ ಬಾಲವಾಗಿದ್ದ ಕ್ಯೂನಲ್ಲಿ ನಿಂತು ಇಮಿಗ್ರೇಷನ್ ಮುಗಿಸಿ ಕಸ್ಟಂಸ್ ತಟಾಯಿಸಿರುವುದು.<br>18. ಉಪನಿಷತ್ ಕ್ರಮಗಳನ್ನು ಅನುಸರಿಸದೆ ತಮ್ಮ ವಿಶಿಷ್ಟ ಅನುಸಂಧಾನ ಮಾರ್ಗದಿಂದ ಸೆಣಸಿ ಸ್ವಂತಿಕೆಯನ್ನು ಕಾಪಾಡಿಕೊಂಡಿರುವುದು.<br>19. ತಮ್ಮ ಸಂಬಂಧಿಕರನ್ನು ಸಂಪರ್ಕಿಸಿದ್ದು – ಅಲ್ಲಿಯೂ ಸಿಗದಿದ್ದಾಗ ಅಮೇರಿಕ ದೇಶದ ಟಿ.ವಿ., ರೇಡಿಯೋ, ಪತ್ರಿಕೆಗಳ ಮೂಲಕ ಅನಿಸ್ವಾಳ ಕರುಣಾಜನಕ ಕತೆಯನ್ನು ಪ್ರಚಾರ ಮಾಡಿದ್ದು. | |
| | **(ಇ)** | **ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.** | **3 × 2 = 6** |
| | 20. | ಇದು ಅಂತಿಂಥ ಮರ ಅಲ್ಲ – ಒಂದೊಂದು ಮರಕ್ಕೂ ಬೊಗಸೆ ಚಿನ್ನ ಸಿಗುತ್ತದೆ – ಈ ಮರ ಐಶ್ವರ್ಯ ಕೊಡ್ತದೆ, ಅಧಿಕಾರ ಕೊಡ್ತದೆ. | |
| | 21. | ಗಿಡಕ್ಕೆ ಮರವಾಗುವ ಆಸೆ – ಕಲ್ಲಿಗೆ ಬಂಡೆಯಾಗುವ ಆಸೆ – ತೊರೆಗೆ ಕಡಲಾಗುವ ಆಸೆ – ಅಲ್ಪನಾದ ನನಗೆ ದ್ರೋಣಾಚಾರ್ಯರಂತಹ ಮಹಾನ್ ಗುರುಗಳಿಂದ ವಿದ್ಯೆ ಕಲಿತು ಮಹಾನ್ ಬಿಲ್ಲುಗಾರನಾಗುವ ಆಸೆಯನ್ನು ವ್ಯಕ್ತಪಡಿಸುವಂತದ್ದು. | |
| | 22. | ಎಲ್ಲ ಮರಗಳೂ ಸಮಾನ ಎತ್ತರಕ್ಕೆ ಬೆಳೆಯಲಾರವು – ಎಲ್ಲ ಬಂಡೆಗಳೂ ಒಂದೇ ಗಾತ್ರ ಇರಲಾರವು – ಹಾಗೆಯೇ ಮನುಷ್ಯ ಪೂರ್ವಜನ್ಮದ ಪಾಪ ಪುಣ್ಯಗಳಿಗನುಗುಣವಾಗಿ ಮೇಲು ಕೀಳು ಜಾತಿಯಲ್ಲಿ ಹುಟ್ಟುತ್ತಾನೆ. | |
| | 23. | ಯುದ್ಧವೆಂದರೆ ಬರೀ ಹತ್ಯೆಯಲ್ಲ – ಸಂಧಾನವೂ ಅದರ ಒಂದು ಭಾಗ – ಕಾಳಗವೆಂದರೆ ಬರೀ ಮುನ್ನುಗ್ಗುವುದಲ್ಲ – ಅಸಹಾಯಕರಾಗಿದ್ದಾಗ ಹಿಮ್ಮೆಟ್ಟುವುದು, ತಪ್ಪಿಸಿಕೊಳ್ಳುವುದು ಒಂದು ತಂತ್ರ. | |

| | | ಇ – ವಿಭಾಗ | |
|---|---|---|---|
| III. | (ಅ) | **ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** | 2 × 3 = 6 |
| | | **(ಕವಿ, ಕೃತಿಗೆ – 1 ಅಂಕ, ಸಂದರ್ಭ ವಿವರಣೆ ಹಾಗೂ ಸ್ವಾರಸ್ಯಕ್ಕೆ – 2 ಅಂಕ)** | |
| | 24. | ಆಯ್ದಕ್ಕಿ ಲಕ್ಕಮ್ಮ ಬರೆದಿರುವ ವಚನಗಳಿಂದ ಆಯ್ಕೆ. ಭಕ್ತಿಯಲ್ಲಿ ತಲ್ಲೀನನಾದವನಿಗೆ ಬಡತನವಿಲ್ಲ ಎಂಬ ಭಾವ. ಶುದ್ಧಮನಸ್ಸಿನಿಂತ ಕಾಯಕವನ್ನು ಮಾಡುವವನು ಸದ್ಭಕ್ತ ಎಂಬ ಕವಯಿತ್ರಿಯ ನಿಲುವು – ಆ ಸದ್ಭಕ್ತನಿಗೆ ಸಿಗುವ ಪ್ರತಿಫಲ, ಸಂತೋಷ, ತೃಪ್ತಿಯ ವಿವರಣೆ. | |
| | 25. | ಕನಕದಾಸರ ಎಲ್ಲಾರೂ ಮಾಡುವುದು ಕೀರ್ತನೆ.<br>ಕೆಲವು ಜನರು ಹೊಟ್ಟೆಪಾಡಿಗಾಗಿ ಕಷ್ಟಪಟ್ಟು ವಿವಿಧ ವೃತ್ತಿಗಳನ್ನು ಮಾಡುತ್ತಿರುವ ವಾಸ್ತವ ಚಿತ್ರಣ – ಅದರಲ್ಲೂ ರೈತರು ಹೊಟ್ಟೆಬಟ್ಟೆಗಾಗಿ ಶ್ರಮದ ಕೃಷಿ ಕೆಲಸಗಳನ್ನು ಮಾಡುತ್ತಿರುವ ಬಗ್ಗೆ ಕವಿಗಿರುವ ಸಹಾನುಭೂತಿ. | |
| | 26. | ಜಿ.ಎಸ್. ಶಿವರುದ್ರಪ್ಪನವರ ಭೀಮಾಲಾಪ ಪದ್ಯ.<br>ಭೀಮ ಶಕ್ತಿಯಿದ್ದರೂ ವಿರಾಟರಾಯನ ಅರಮನೆಯಲ್ಲಿ ಬಾಣಸಿಗನಾಗಿ ಕೆಲಸ ನಿರ್ವಹಿಸಬೇಕಾದ ಅನಿವಾರ್ಯತೆ – ಈ ಸನ್ನಿವೇಶದಲ್ಲಿ ಭೀಮನ ಕೋಪದ ತೀವ್ರತೆಯ ಚಿತ್ರಣ – ಈ ಮೂಲಕ ಆಧುನಿಕ ಸಮಾಜದಲ್ಲಿ ಸತ್ವಪೂರ್ಣ ವ್ಯಕ್ತಿಗಳ ಅಸಹಾಯಕ ಸ್ಥಿತಿಯ ಬಗ್ಗೆ ಕವಿಗಿರುವ ವಿಷಾದ. | |
| | (ಆ) | ಈ ಕೆಳಗಿನವುಗಳಲ್ಲಿ **ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ.**<br>**(ಕೃತಿ, ಕರ್ತೃ – 1 ಅಂಕ, ಸಂದರ್ಭ ವಿವರಣೆ ಹಾಗೂ ಸ್ವಾರಸ್ಯಕ್ಕೆ – 2 ಅಂಕ)** | 1 × 3 = 3 |
| | 27. | ಪೂರ್ಣಚಂದ್ರ ತೇಜಸ್ವಿಯವರ ಯಾದೇವಿ ಸರ್ವಭೂತೇಷು .... ಕುವೆಂಪು ಅವರಿಗೆ ಪ್ರಕೃತಿ ಪಕ್ಷಿಗಳ ಬಗ್ಗೆ ಇದ್ದ ಕಾಳಜಿ – ಮಕ್ಕಳು ಹಕ್ಕಿಗೂಡನ್ನು ಹಾಳುಮಾಡಿಯಾರು ಎಂಬ ಆತಂಕ ಭಾವನೆಯಿಂದ ಹೇಳಿದ್ದು. | |
| | 28. | ಶಿವಕೋಟ್ಯಾಚಾರ್ಯರ 'ಸುಮತಿ ಕತೆ'<br>ಸಾಸಿರ ದೀನಾರದ ಪೊಟ್ಟಣ ಕಳುವಾದಾಗ ಸುಮಿತ್ರಶೆಟ್ಟಿ ರಾಜನಿಗೆ ದೂರುನೀಡಿದ ಸಂದರ್ಭ – ರಾಜ ತಳಾರನಿಗೆ ವಿಧಿಸುವ ಕಟ್ಟುನಿಟ್ಟಿನ ಸೂಚನೆ – ಕಳ್ಳನನ್ನು ಪತ್ತೆ ಮಾಡದಿದ್ದಲ್ಲಿ ತಳಾರನನ್ನೇ ಶಿಕ್ಷಿಸುತ್ತೇನೆಂಬ ಎಚ್ಚರಿಕೆ. | |

| | | | |
|---|---|---|---|
| | (ಇ) | **ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.**<br>**(ಕೃತಿ, ಕೃತಿಕಾರ – 1 ಅಂಕ, ಸಂದರ್ಭ ಸ್ವಾರಸ್ಯ ವಿವರಣೆ – 2 ಅಂಕ)** | **1 × 3 = 3** |
| | 29. | ಸಿದ್ದಲಿಂಗಯ್ಯನವರ 'ಏಕಲವ್ಯ' ನಾಟಕ. ದ್ರೋಣಾಚಾರ್ಯರು ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಪಡೆದುಹೋದ ಸಂದರ್ಭ – ಏಕಲವ್ಯನ ತಾಯಿಯ ದುಃಖ ಆಕ್ರೋಶ – ಮಗನ ಸಾಧನೆಯ ನಿರೀಕ್ಷೆಯಲ್ಲಿದ್ದ ತಾಯಿಗೆ ಗುರುವಿನ ಮೋಸ ಕೃತ್ಯದಿಂದ ಆಗುವ ಆಘಾತ. | |
| | 30. | ಸಿದ್ದಲಿಂಗಯ್ಯನವರ ಏಕಲವ್ಯ ನಾಟಕ. ದ್ರೋಣಾಚಾರ್ಯರು ಏಕಲವ್ಯನಿಗೆ ಬಿಲ್ಲುವಿದ್ಯೆ ಕಲಿಸಲು ನಿರಾಕರಿಸುವ ಸಂದರ್ಭ – ಹತಾಶನಾದ ಏಕಲವ್ಯ ಬೇರೆ ದಾರಿ ಕಾಣದೆ ಕನಸು ನನಸಾಗಲಿಲ್ಲ ಎಂಬ ನಿರಾಸೆಯಿಂದ ಕೊರಗುವುದು – ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳವರ್ಗದವರು ತಿರಸ್ಕಾರಕ್ಕೆ ಒಳಗಾಗುವ ದಯನೀಯ ಸ್ಥಿತಿ. | |
| | | **ಈ – ವಿಭಾಗ** | |
| **IV.** | **(ಅ)** | **ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** | **3 × 4 = 12** |
| | 31. | ಶ್ರೀಕೃಷ್ಣ ಸಂಧಾನಕ್ಕೆ ಬಂದಿದ್ದಾಗ ತೋರಿಸಿದ್ದ ಅಹಂಕಾರ ಈಗೆಲ್ಲಿ ಹೋಯ್ತು – ದ್ರೌಪದಿಯ ವಸ್ತ್ರ ಹಾಗೂ ಕೇಶವನ್ನು ಸೆಳೆದು ಅವಮಾನಗೊಳಿಸಿದ್ದ ಮದ ಈಗ ಏನಾಯ್ತು – ಮತ್ಸರದಿಂದ ಪಾಂಡವರನ್ನು ಕಾಡಿಗೆ ಕಳುಹಿಸಿ ಅವರನ್ನು ತರಗೆಲೆಗಳಂತೆ ತಿರ್ರನೆ ತಿರುಗಿಸಿದ ಸೊಕ್ಕು ಈಗ ಏನಾಯ್ತು ಈ ಮೂದಲಿಕೆಯ ಮಾತುಗಳಿಂದ ದುರ್ಯೋಧನನ ಎಲ್ಲ ಕ್ಷಾತ್ರ ಗುಣವನ್ನು ಭೀಮ ಅವಹೇಳನ ಮಾಡಿದ್ದು. | |
| | 32. | ಕಾಡಿನಲ್ಲಿ ಮಗ ಲೋಹಿತಾಶ್ವನ ಶವವನ್ನು ಕಂಡಾಗ ತಾಯಿ ಚಂದ್ರಮತಿಯ ಶೋಕ ಕಟ್ಟೆಯೊಡೆದ ರೀತಿ ಮಗನನ್ನು ನೋಡಿ ಆ ತಾಯಿ ತನ್ನೆಲ್ಲ ಕಷ್ಟ ಅವಮಾನಗಳನ್ನು ಸಹಿಸಿಕೊಂಡಿದ್ದ ಸನ್ನಿವೇಶಗಳು – ಸಿರಿ ಹೋದರೂ, ನೆಲೆಗೆಟ್ಟರೂ, ಪರದೇಶ ಹೊಕ್ಕರೂ, ಸೇವಕಿಯಾಗಿ ಕೆಲಸ ಮಾಡುವ ಸನ್ನಿವೇಶ ಒದಗಿದರೂ, ಒಡೆಯನು ಹಿಂಸಿಸಿದರೂ ಸಹಿಸಿಕೊಂಡಿದ್ದೆ ಎಂಬ ದುಃಖ – ಗಂಡನ ಅನುಪಸ್ಥಿತಿಯಲ್ಲಿ ಉಂಟಾದ ಈ ಸಾವು ನನ್ನನ್ನು ಹೊಣೆಗೇಡಿಯನ್ನಾಗಿಸಿತು ಎಂಬ ಅಪರಾಧ ಪ್ರಜ್ಞೆಯ ಅಳಲು – ಗಂಡ ಬಂದು ಮಗನನ್ನು ತೋರಿಸು ಎಂದರೆ ಯಾರನ್ನು ತೋರಿಸಲಿ ಎನ್ನುವ ಆಕೆಯ ಸಂಕಟ ಭಾವ. | |
| | 33. | ನೀತಿ ನಿಯಮಗಳ ಚೌಕಟ್ಟು ಬರೀ ಸ್ತ್ರೀಯರಿಗೆ ಮಾತ್ರವಲ್ಲ, ಪತಿ – ಪತ್ನಿಯರಿಬ್ಬರೂ ಸಂಸಾರ ಬಂಡಿಯ ಎರಡು ಚಕ್ರಗಳಿದ್ದ ಹಾಗೆ – ಪರಸ್ಪರ ಒಬ್ಬರನ್ನೊಬ್ಬರು ಅನುನಯಿಸಿ ಬದುಕಿದಾಗ ಕೌಟುಂಬಿಕ ಬದುಕು ಅರ್ಥಪೂರ್ಣ – ಗಂಡ ಮಡದಿಯನ್ನು ಪ್ರೀತಿಯಿಂದ ಆದರಿಸಬೇಕು, ನಡೆಸಿಕೊಳ್ಳಬೇಕು ಎಂಬ ಅರ್ಥಪೂರ್ಣವಾದ ಮಾತು – ಪ್ರೀತಿ ಹೊಂದಾಣಿಕೆಯಿಂದ ಬದುಕುವ ಸತಿಪತಿಗಳಿಗೆ ಪುರುಷೋತ್ತಮ (ದೇವರು) ಒಲಿಯುತ್ತಾನೆ ಎನ್ನುವ ಭಾವ. | |

| | | | |
|---|---|---|---|
| | 34. | ವರ್ಣವ್ಯವಸ್ಥೆಯ ಬಗ್ಗೆ ಲೇಖಕರಿಗಿರುವ ಅಸಮಾಧಾನ ಪೂರ್ವಾಂಗನೆ ಮೂಲಕ ವ್ಯಕ್ತವಾಗುವ ರೀತಿ – ಪ್ರಕೃತಿಯಲ್ಲಿ ವೈವಿಧ್ಯತೆ ಸಹಜ – ಬಿಳಿ ಶ್ರೇಷ್ಠ ಕಪ್ಪು ಕನಿಷ್ಠ ಎಂಬ ವಿಭಜನೆ ತಪ್ಪು ಎಂಬ ಭಾವ – ಕಪ್ಪು ಮೋಡ ಭೂಮಿಗೆ ಮಳೆ ತರುತ್ತದೆ –ಕಣ್ಣಿನೊಳಗಿನ ಕಪ್ಪು ಭಾಗ ದೃಷ್ಟಿ ಸಂಕೇತ – ಕಪ್ಪು ಕೂದಲು ಯೌವ್ವನದ ಸೂಚನೆ – ಹತ್ತಿ ಬೆಳೆಯುವುದು ಕಪ್ಪು ಮಣ್ಣಿನಿಂದ – ವಿಜ್ಞಾನದ ಎಲ್ಲ ಆವಿಷ್ಕಾರಗಳು ಕಪ್ಪು – ಕಬ್ಬಿಣ, ವಾಹನದ ಗಾಲಿ ಡಾಂಬರಿನ ಬೀದಿ ಎಲ್ಲವೂ ಕಪ್ಪು – ಈ ಮಾತುಗಳಿಂದ ಬಿಳಿಗಳತಿ (ಪಶ್ಚಿಮಾಂಗನೆ)ಯ ಅಹಂಕಾರವನ್ನು ಬದಲಾಯಿಸುವ ಪ್ರಯತ್ನ. | |
| | (ಆ) | **ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** | **2 × 4 = 8** |
| | 35. | ತಾನು ಕಷ್ಟಪಟ್ಟು ದುಡಿದ ಒಡವೆ ಕೊಡುವುದಿಲ್ಲವೆಂದದ್ದೆ ಮಹಾಪರಾಧವಾಯಿತೆ ? ಅದಕ್ಕಾಗಿ ತನ್ನನ್ನೂ ಸ್ವಂತ ಮಕ್ಕಳನ್ನೂ ಈ ರೀತಿ ನಿರ್ಗತಿಕರನ್ನಾಗಿ ಮಾಡಬೇಕೆ ? ಗಂಡ ಹೆಂಡತಿಯ ಸಂಬಂಧ ಮೂರು ಬಾರಿ ತಲಾಖ್ ಎಂದೊಡನೆ ಮುಗಿದು ಹೋಗುತ್ತದೆಯೇ ? ಈ ತಲಾಖ್ ಅಷ್ಟೊಂದು ಶಕ್ತಿಯುತವಾಗಿದೆಯೇ ? ತಾನು ಹೀಗೆ ಮೂರು ಬಾರಿ ಈ ಶಬ್ದಗಳನ್ನು ಉಚ್ಚರಿಸಿ ಆತನಿಂದ ದೂರವಾಗಬಹುದೆ ? ಎಂಬ ಚಿಂತೆ. | |
| | 36. | ಟ್ಯಾಕ್ಸಿ ಚಾಲಕನ ಬಾಹ್ಯರೂಪವನ್ನು ಕಂಡು ಲೇಖಕರಿಗಾದ ಹೆದರಿಕೆ ಭಾವ – ಟ್ಯಾಕ್ಸಿ ಓಡಿದಂತೆಯೇ ವೇಗವಾಗಿ ಮೀಟರ್ ಓಡುತ್ತಿರುವುದನ್ನು ಕಂಡಾಗ ಉಂಟಾದ ದಿಗಿಲು – ನನ್ನ ದಿಕ್ಕು ದಿವಾಳಿ ತಪ್ಪಿಸಿ ಜೇಬಿನಲ್ಲಿ ಇದ್ದ ಒಟ್ಟು ಅರವತ್ತು ಡಾಲರುಗಳನ್ನು ಎತ್ತಿಹಾಕಲು ಹವಣಿಸುತ್ತಿದ್ದಾನೆ ಎಂಬ ಯೋಚನೆ ಬಂದದ್ದು. | |
| | 37. | ಅನಿಸ್ಸಾಳ ತಂದೆ ತಾಯಿಯರ ಮಜ್ಜಾರಸ ಮಗಳಿಗೆ ಹೊಂದುವುದಿಲ್ಲ– ಸಹೋದರನದ್ದೂ ಸರಿ ಹೊಂದಲಿಲ್ಲ – ಸಂಬಂಧಿಕರದ್ದೂ ಸರಿ ಹೊಂದಲಿಲ್ಲ– ಟಿ.ವಿ., ಪತ್ರಿಕೆಗಳ ಮೂಲಕ ಪ್ರಚಾರ ಮಾಡಿದ್ದೂ ನಿಷ್ಫಲ – ತಾಯಿ ಮೇರಿ ಗರ್ಭ ಧರಿಸಬೇಕೆಂಬ ವೈದ್ಯರ ಸಲಹೆ – ಸಂತಾನಹರಣ ಶಸ್ತ್ರ ಚಿಕಿತ್ಸೆಯ ಅಡ್ಡಿ ಆತಂಕಗಳು – ಪುನಃ ಶಸ್ತ್ರಚಿಕಿತ್ಸೆ– ತಾಯಿ ಮೇರಿಗೆ 43 ವರ್ಷವಾದ್ದರಿಂದ ಗರ್ಭಧಾರಣೆಯ ಗ್ಯಾರಂಟಿ ಇಲ್ಲದಿರುವುದು – ಗರ್ಭ ನಿಂತರೂ ಭ್ರೂಣದ ರಕ್ತಗುಣ ರೋಗಿ ಅನಿಸ್ಸಾಳ ರಕ್ತಗುಣಕ್ಕೆ ಹೊಂದಾಣಿಕೆಯಾಗದಿರುವ ಸಾಧ್ಯತೆ. | |
| | (ಇ) | ಈ ಕೆಳಗಿನವುಗಳಲ್ಲಿ **ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** | **2 × 4 = 8** |
| | 38. | ಮೇಳದವರ ಹಾಡಿನಲ್ಲಿ ಏಕಲವ್ಯನ ಸಾಹಸದ ವರ್ಣನೆ – ಸೊಕ್ಕಿದವರ ಸುಟ್ಟು ಹಾಕಿದ ಪರಾಕ್ರಮ – ಅನಾಥವಾದ ಹಕ್ಕಿಮರಿಗಳನ್ನು ಸಾಕಿದ ಪ್ರೀತಿ – ಬಂಡೆಗೆ ಬಾಣ ಹೊಡೆದು ನೀರು ತರಿಸಿದ ಸಾಹಸ – ಸಿಂಹದ ಮೇಲೆ ಕುಳಿತು ಅದನ್ನು ನಿಯಂತ್ರಿಸಿದ ಧೈರ್ಯ – ಹುಲಿಯನ್ನು ಮನೆಯ ನಾಯಿಯನ್ನಾಗಿ ಮಾಡಿಕೊಂಡ ಪೌರುಷ – ದುಷ್ಟರನ್ನು ಮಟ್ಟಹಾಕಿದ ಕಲಿತನ. | |

| | | | |
|---|---|---|---|
| | 39. | ಈ ಲೋಕವ್ಯವಸ್ಥೆಯನ್ನು ಕಿಂಚಿತ್ತೂ ಊನವಾಗದಂತೆ ಕಾಪಾಡುವುದೇ ಲೋಕಕಲ್ಯಾಣ – ಈ ಲೋಕದಲ್ಲಿ ಮುಗಿಲೆತ್ತರದ ತೆಂಗಿನ ಮರಗಳಿವೆ – ಸಣ್ಣ ಪುಟ್ಟ ತುಳಸೀ ಗಿಡಗಳೂ ಇವೆ – ಮಾವಿನಮರ, ಅದನ್ನು ಬಳಸಿದ ಬಳ್ಳಿಗಳು – ಪ್ರಾಣಿ ಪಕ್ಷಿಗಳಲ್ಲಿರುವ ಏರುಪೇರು – ಈ ಬಗೆಯ ಪ್ರಕೃತಿ ಸಹಜವಾದ ಹೋಲಿಕೆಗಳೊಂದಿಗೆ ಮನುಷ್ಯ ಸಮಾಜದ ಏರು ಪೇರುಗಳನ್ನು ಸಮರ್ಥಿಸಿಕೊಳ್ಳುವ ಭೀಷ್ಮನ ಮಾತುಗಳು – ಈ ವ್ಯವಸ್ಥೆಗೆ ಕುಂದುಂಟಾದರೆ ದೇವರಿಗೆ ಅವಮಾನ ಮಾಡಿದಂತೆ ಎನ್ನುವ ಮೂಲಕ ಸಾಂಪ್ರದಾಯಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಪುರೋಹಿತಶಾಹಿ ಮನಸ್ಥಿತಿ. | |
| | 40. | ಧರ್ಮಯುದ್ಧದಲ್ಲಿ ಪಾಂಡವರನ್ನು ಬೆಂಬಲಿಸಿದಾಗ ಮಾತ್ರ ಎನ್ನುವ ಅರ್ಜುನನ ಮಾತು – ಶಾಸ್ತ್ರ ಎಂದೆಂದಿಗೂ ಪ್ರಶ್ನಾರ್ಹವಲ್ಲ, ಏಕಲವ್ಯನ ಸೇಡು ಅರ್ಥವಿಲ್ಲದ್ದು, ಏಕಲವ್ಯ ದೊಡ್ಡ ಬಿಲ್ಲುಗಾರನಾಗಿರುವುದು ಆಕಸ್ಮಿಕ, ಅದು ಲೋಕ ಸಹಜವಾದುದಲ್ಲ ಎನ್ನುವ ಅರ್ಜುನನ ಅಹಂಕಾರ ಭಾವ – ಈ ಕಾರಣದಿಂದ ಪಾಂಡವರಿಗೆ ಬೆಂಬಲ ನೀಡಬೇಕೆನ್ನುವ ಅರ್ಜುನನ ಸಮರ್ಥನೆ. | |
| | | **ಉ – ವಿಭಾಗ** | |
| **V.** | **(ಅ)** | **ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ.**<br><br>**(ಕವಿ, ಕೃತಿ – 1 ಅಂಕ, ಭಾವಾರ್ಥ ವಿಶೇಷತೆ – 3 ಅಂಕ, ವಿಮರ್ಶೆ – 1 ಅಂಕ)** | **1 × 5 = 5** |
| | 41. | ರನ್ನ ಕವಿಯ 'ಸಿಂಹನಾದಂಗೆಯ್ದಂ' ಕಾವ್ಯಭಾಗ.<br><br>ಭೀಮನ ಸಿಂಹಗರ್ಜನೆ ಶಬ್ದದ ತೀವ್ರತೆ – ಸಿಂಹಗರ್ಜನೆಯ ಶಬ್ದ ಹಾಗೂ ಸಿಡಿಲಿನ ಭೀಕರ ಶಬ್ದವನ್ನು ಮೀರಿಸುವಂತಿದ್ದ ಆ ಶಬ್ದಕ್ಕೆ ವೈಶಂಪಾಯನ ಸರೋವರದಲ್ಲಿ ಅಡಗಿದ್ದ ದುರಂತನಾಯಕ ದುರ್ಯೋಧನನಲ್ಲಿ ಉಂಟಾದ ಕೋಪದ ತೀವ್ರತೆ – ಪರಿಣಾಮ – ದುರ್ಯೋಧನ ನೀರೊಳಗಿದ್ದೂ ಬೆವರಿದ ಎನ್ನುವ ಮಾತಿನ ಧ್ವನಿ. | |
| | 42. | ಜಿ.ಎಸ್. ಶಿವರುದ್ರಪ್ಪ ಅವರ 'ಭೀಮಾಲಾಪ.'<br><br>ಸಂಕೀರ್ಣವಾದ ಆಧುನಿಕ ಬದುಕಿನಲ್ಲಿ ಸತ್ವಪೂರ್ಣ ವ್ಯಕ್ತಿಯೊಬ್ಬ ಅನುಭವಿಸಬೇಕಾದ ಅಸಹಾಯಕ ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಪುರಾಣ ಪ್ರತಿಮೆಯಾದ ಭೀಮನ ಮೂಲಕ ಅಭಿವ್ಯಕ್ತಿಸಿರುವುದು – ಪಾಂಡವರು ಪರಾಕ್ರಮಿಗಳಾಗಿದ್ದರೂ ಬೇರೆ ಬೇರೆ ವೇಷ ಹಾಗೂ ಹೆಸರಿನೊಂದಿಗೆ ವಿರಾಟರಾಯನ ಆಸ್ಥಾನದಲ್ಲಿ ಅಜ್ಞಾತವಾಸ ಮಾಡಬೇಕಾದ ಸ್ಥಿತಿ – ಅರ್ಜುನನಿಗೆ ಬೃಹನ್ನಳೆ ವೇಷ – ಕಾವಿಯುಟ್ಟಿರುವ ಧರ್ಮರಾಯ – ದನಗಳ ರಕ್ಷಣೆಯ ಹೊಣೆ ಹೊತ್ತಿರುವ ಸಹದೇವ – ಅಶ್ವಪಾಲಕನಾಗಿರುವ ನಕುಲ, ಬಾಣಸಿಗನಾಗಿರುವ ಭೀಮ. | |

| | | | |
|---|---|---|---|
| | | **ಭಾಷಾಭ್ಯಾಸ** | |
| **VI.** | **(ಅ)** | **ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ.** | **6 × 2 = 12** |
| | 43. | ಈ ಪದಗಳಿಗೆ ಅರ್ಥ ಬರೆಯಿರಿ.<br>ಸೋದರ / ತಮ್ಮ , ಸೂರ್ಯ | |
| | 44. | ಈ ಪದಗಳಿಗೆ ತತ್ಸಮ – ತದ್ಭವಗಳನ್ನು ಬರೆಯಿರಿ.<br>ಜ್ಯೋತ್ಸ್ನಾ, ರಕ್ಕಸ | |
| | 45. | ಈ ಪದಗಳಿಗೆ ಸಮಾನಾರ್ಥ ಶಬ್ಧಗಳನ್ನು ಬರೆಯಿರಿ.<br>ಅಗ್ನಿ , ಪಾವಕ, ಬೆಂಕಿ, ಅನಲ (ಯಾವುದಾದರೂ ಎರಡು)<br>ಕಾಡು, ಕಾನನ, ಕಾಂತಾರ, ವಿಪಿನ (ಯಾವುದಾದರೂ ಎರಡು) | |
| | 46. | ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.<br>ಸೇವಿಸು, ಚಿಗುರು, ನದಿ, ತ್ಯಜಿಸು | |
| | 47. | ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ.<br>ಜೀವಹಿಂಡು – ಹಿಂಸೆಯನ್ನುಂಟು ಮಾಡು ಎನ್ನುವ ಅರ್ಥದಲ್ಲಿ ಬಳಸುವುದು.<br>ಮಣಭಾರ – ತುಂಬ ತೂಕವುಳ್ಳದ್ದು ಎನ್ನುವ ಅರ್ಥದಲ್ಲಿ ಬಳಸುವುದು. | |
| | 48. | ಈ ಪದಗಳಿಗೆ ನಿಷೇಧ ರೂಪ ಬರೆಯಿರಿ.<br>ಹೋಗರು / ಹೋಗಲಾರರು / ಹೋಗುವುದಿಲ್ಲ<br>ಕಾಣಳು / ಕಾಣಲಾರಳು / ಕಾಣುವುದಿಲ್ಲ | |
| | 49. | ಈ ಪದಗಳ ವಿಭಕ್ತಿ ಪ್ರತ್ಯಯ ಗುರುತಿಸಿ.<br>ಅಲ್ಲಿ (ಸಪ್ತಮಿ ವಿಭಕ್ತಿ)<br>ಗೆ (ಚತುರ್ಥಿ ವಿಭಕ್ತಿ) | |

| | | | |
|---|---|---|---|
| | (ಇ) | **ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ.**<br>**(ಪೀಠಿಕೆ – 1 ಅಂಕ, ವಿಷಯ ವಿವರಣೆ – 3 ಅಂಕ, ಮುಕ್ತಾಯ – 1 ಅಂಕ)** | 1 × 5 = 5 |
| | 50. | ಪುಸ್ತಕಗಳನ್ನು ಓದುವುದರಿಂದ ಜ್ಞಾನ ವಿಸ್ತಾರವಾಗುತ್ತದೆ ಎಂಬ ಹಿನ್ನೆಲೆಯ ಉತ್ತರ. | |
| | 51. | ಬರಗಾಲದಿಂದಾಗುವ ದುಷ್ಪರಿಣಾಮಗಳು, ಮಾನವರು ಎದುರಿಸಬೇಕಾದ ಸಮಸ್ಯೆಗಳನ್ನು ಕುರಿತಂತೆ ವಿವರಣೆ. | |
| | (ಈ) | **ಪತ್ರಲೇಖನ**<br>**ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪತ್ರವನ್ನು ಬರೆಯಿರಿ.**<br>**(ಪತ್ರದ ಆರಂಭ, ವಿಳಾಸ – 1 ಅಂಕ, ಸಂಬೋಧನೆ ಹಾಗೂ ಪತ್ರದ ಒಡಲು – 2 ಅಂಕ, ಮುಕ್ತಾಯ – 1 ಅಂಕ)** | 1 × 4 = 4 |
| | 52. | ವೈಯಕ್ತಿಕ ಪತ್ರದ ನಮೂನೆ<br>ಮೇಲಿನ ಸ್ವರೂಪದಲ್ಲಿ ವೈಯಕ್ತಿಕ ಪತ್ರವನ್ನು ಬರೆಯುವುದು. | |
| | 53. | ವ್ಯಾವಹಾರಿಕ ಪತ್ರದ ನಮೂನೆ<br>ಮೇಲಿನ ಸ್ವರೂಪದಲ್ಲಿ ವ್ಯಾವಹಾರಿಕ ಪತ್ರವನ್ನು ಬರೆಯುವುದು. | |
| | (ಉ) | **ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.**<br>**(ಗಾದೆಯ ಮಹತ್ವ ಹಾಗೂ ವಾಚ್ಯಾರ್ಥ ವಿವರಣೆ – 1 ಅಂಕ, ಸೂಚ್ಯಾರ್ಥದ ವಿವರಣೆ – 2 ಅಂಕ, ಗಾದೆ ನೀತಿ – 1ಅಂಕ)** | 1 × 4 = 4 |
| | 54. | ಸಮಸ್ಯೆಗಳು ಎದುರಾದಾಗ ಪರಸ್ಪರ ಕುಳಿತು ಪರಿಹರಿಸಿಕೊಳ್ಳಬೇಕು. ಜಗಳವಾಡಿಕೊಂಡರೆ ಇನ್ನೊಬ್ಬರಿಗೆ ಲಾಭ. | |
| | 55. | ಮಾತು ಚಾಟಿಗಿಂತ ಹರಿತ. ಬುದ್ಧಿವಂತ ಮಾತಿನಿಂದ ಬದಲಾಗುತ್ತಾನೆ. ತಿಳುವಳಿಕೆಯಿಲ್ಲದವರು ಕೋಣದ ಹಾಗೆ. | |